**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.526/2025**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಶಿವಮ್ಮ ಗಂಡ ರಾಮಪ್ಪ, ವಯಸ್ಸು: 64 ವರ್ಷಗಳು,
ಉಃ ಮನೆಕೆಲಸ,

2. ಉದಯ ತಂದೆ ಯಮನಪ್ಪ, ವಯಸ್ಸು: 22 ವರ್ಷಗಳು,
ಉಃ ಒಕ್ಕಲುತನ,

3. ಚನ್ನಬಸವ ತಂದೆ ರಾಮಪ್ಪ, ವಯಸ್ಸು: 40 ವರ್ಷಗಳು,
ಉಃ ಅಂಗಡಿ ಕೆಲಸ,

4. ದುರುಗೇಶ ತಂದೆ ರಾಮಪ್ಪ, ವಯಸ್ಸು: 35 ವರ್ಷಗಳು,
ಉಃ ಒಕ್ಕಲುತನ,

5. ಭೀಮಶಪ್ಪ @ ಭೀಮಪ್ಪ ತಂದೆ ರಾಮಪ್ಪ,
ವಯಸ್ಸು: 30 ವರ್ಷಗಳು, ಉಃ ಒಕ್ಕಲುತನ,

6. ಶಿವರಾಜ ತಂದೆ ಯಮನಪ್ಪ, ವಯಸ್ಸು: 28 ವರ್ಷಗಳು,
ಉಃ ಚಾಲಕ,

7. ರವಿ ತಂದೆ ಯಮನಪ್ಪ, ವಯಸ್ಸು: 27 ವರ್ಷಗಳು,
ಉಃ ಒಕ್ಕಲುತನ,

8. ಮಲ್ಲಮ್ಮ ಗಂಡ ಯಮನಪ್ಪ, ವಯಸ್ಸು: 45 ವರ್ಷಗಳು,
ಉಃ ಮನೆಕೆಲಸ,

9. ನಾಗಮ್ಮ ಗಂಡ ಹನುಮಂತ, ವಯಸ್ಸು: 36 ವರ್ಷಗಳು,
ಉಃ ಮನೆಕೆಲಸ,

10. ಶರಬಮ್ಮ ಗಂಡ ಭೀಮಪ್ಪ @ ಭೀಮಪ್ಪ, ವಯಸ್ಸು: 28 ವರ್ಷಗಳು, ಉಃ ಮನೆಕೆಲಸ,

11. ನಾಗಮ್ಮ ಗಂಡ ಚನ್ನಬಸವ, ವಯಸ್ಸು: 35 ವರ್ಷಗಳು, ಉಃ ಮನೆಕೆಲಸ,

12. ನಿರ್ಮಲ ಗಂಡ ಶಿವು @ ಶಿವರಾಜ, ವಯಸ್ಸು: 28 ವರ್ಷಗಳು, ಉಃ ಮನೆಕೆಲಸ, ಎಲ್ಲರೂ ಸಾಃ ಗಲಗ, ತಾಃ ದೇವದುರ್ಗ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 19.05.2025 ರಂದು ರಾತ್ರಿ 08.30 ಗಂಟೆ ಸಮಯದಲ್ಲಿ ಜಾಲಹಳ್ಳಿ ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಗಲಗ ಗ್ರಾಮದಲ್ಲಿ ಸಾಕ್ಷಿ–1, 4 ಮತ್ತು 5 ರವರು ತಮ್ಮ ಮನೆಯ ಮುಂದಿನ ಅಂಗಳದಲ್ಲಿದ್ದಾಗ 1 ರಿಂದ 12 ನೇ ಆರೋಪಿತರಾದ ನೀವುಗಳು ಅಪರಾಧವೆಸಗುವ ಏಕೋದ್ದೇಶದಿಂದ ಅಕ್ರಮಕೂಟವನ್ನು ರಚಿಸಿಕೊಂಡು ಅದರ ಸದಸ್ಯರಾಗುವ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.189(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 12 ನೇ ಆರೋಪಿತರಾದ ನೀವುಗಳು, ಸದರಿ ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.191(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಸದರಿ ಏಕೋದ್ದೇಶದಿಂದ ಮುಂದುವರೆದು, 1 ರಿಂದ 12 ನೇ ಆರೋಪಿತರಾದ ನೀವುಗಳು, ಸದರಿ ಅಕ್ರಮ ಕೂಟದ ಸದಸ್ಯರಾಗಿ ಅಪಾಯಕರವಾದ ಆಯುಧವಾದ ಕಲ್ಲುಗಳನ್ನು ಹಿಡಿದುಕೊಂಡು ಬಂದು

ದೊಂಬಿ ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.191(3) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಏಕೋದ್ದೇಶದಿಂದ ಮುಂದುವರೆದು, 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದಿದ್ದು, 9 ನೇ ಆರೋಪಿತರಾದ ನೀವು ಕೈಯಿಂದ ಕಪಾಳಕ್ಕೆ ಹೊಡೆದಿದ್ದು, 3 ರಿಂದ 7 ಮತ್ತು 10 ರಿಂದ 12 ನೇ ಆರೋಪಿತರಾದ ನೀವುಗಳು ಸಾಕ್ಷಿ-1 ರವರಿಗೆ ಕೈಯಿಂದ ನೂಕಾಡಿ ನೋವನ್ನುಂಟು ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಏಕೋದ್ದೇಶದಿಂದ ಮುಂದುವರೆದು, 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕಲ್ಲನ್ನು ತೆಗೆದುಕೊಂಡು ಬೆನ್ನಿಗೆ ಗುದ್ದಿ ಗಾಯ ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.118(1) ಸಹವಾಚಕ ಕಲಂ 190 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸದರಿ ಏಕೋದ್ದೇಶದಿಂದ ಮುಂದುವರೆದು, 8 ನೇ ಆರೋಪಿತರಾದ ನೀವು ಸಾಕ್ಷಿ-5 ರವರಿಗೆ ಎಡಗಾಲಿನ ಚಪ್ಪಲಿಯಿಂದ ಕಪಾಳಕ್ಕೆ ಹೊಡೆದು ಅವಮಾನ ಪಡಿಸಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.133 ಸಹವಾಚಕ ಕಲಂ.190 ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 12 ನೇ ಆರೋಪಿತರಾದ ನೀವುಗಳು, ಸಾಕ್ಷಿ-1, 4 ಮತ್ತು 5 ರವರಿಗೆ ಈ ಸೂಳೆ ಮಕ್ಕಳದು ಏನು ಕೇಳುತ್ತಿರಿ ಹಾಕಿ ಒದಿರಿ ಅಂತಾ ಅವಾಚ್ಯವಾಗಿ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.352 ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 12 ನೇ ಆರೋಪಿತರಾದ ನೀವುಗಳು, ಸಾಕ್ಷಿ-1, 4 ಮತ್ತು 5 ರವರಿಗೆ ಲೇ ಸೂಳೆ ಮಕ್ಕಳೆ ಜಗಳ ಬಿಡಿಸಿದ್ದರಿಂದ ನಿಮ್ಮನ್ನು ಈ ದಿನ ಬಿಟ್ಟಿದ್ದೇವೆ ಇನ್ನೊಂದು ಸಲ ಕಸವನ್ನು ನಮ್ಮ ಮನೆಯ

ಮುಂದೆ ಹಾಕಿದರೆ ನಿಮ್ಮನ್ನು ಜೀವ ಸಹಿತ ಬಿಡುತ್ತಿರಲಿಲ್ಲ ಅಂತಾ ಜೀವದ ಬೇದರಿಕೆ ಹಾಕಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.351(2) ಸಹ ಕಲಂ.190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 26.05.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.526/2025**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ಧ**

ಆರೋಪಿತರುಃ

1. ಶಿವಮ್ಮ ಗಂಡ ರಾಮಪ್ಪ,
2. ಉದಯ ತಂದೆ ಯಮನಪ್ಪ,
3. ಚನ್ನಬಸವ ತಂದೆ ರಾಮಪ್ಪ,
4. ದುರುಗೇಶ ತಂದೆ ರಾಮಪ್ಪ,
5. ಭೀಮಶಪ್ಪ @ ಭೀಮಪ್ಪ ತಂದೆ ರಾಮಪ್ಪ,
6. ಶಿವರಾಜ ತಂದೆ ಯಮನಪ್ಪ,
7. ರವಿ ತಂದೆ ಯಮನಪ್ಪ,
8. ಮಲ್ಲಮ್ಮ ಗಂಡ ಯಮನಪ್ಪ,
9. ನಾಗಮ್ಮ ಗಂಡ ಹನುಮಂತ,
10. ಶರಬಮ್ಮ ಗಂಡ ಭೀಮಪ್ಪ @ ಭೀಮಪ್ಪ,
11. ನಾಗಮ್ಮ ಗಂಡ ಚನ್ನಬಸವ,
12. ನಿರ್ಮಲ ಗಂಡ ಶಿವು @ ಶಿವರಾಜ,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.